

ಮೊಸಳೆಯ ಅಸ್ಥಿಪಂಜರಕ್ಕೆ ನೇತುಹಾಕಿರುವ ಬೆಳ್ಳಿಯ, ದಂತದ ಆಭರಣಗಳು, ಅರಮನೆಯ ಭವ್ಯತೆಯನ್ನೂ, ಚಾರಿತ್ರಿಕ ಹಿನ್ನೆಲೆಯನ್ನೂ ಬಿಂಬಿಸಿವೆ.

ಜಂಬದ ಜೋಡಿ ನವಿಲುಗಳು ಈ ರಾಜ ಮನೆತನದ ರಾಜಲಾಂಛನ. ಒಂದು ನವಿಲಿನ ಮೊಟ್ಟೆಯಿಂದ ಹುಟ್ಟಿರುವ ಕಾರಣ, ಈ ವಂಶಕ್ಕೆ 'ಮೋರ್ ಭಾಂಜ್' (ಮೋರ್ ಎಂದರೆ ನವಿಲು) ಹೆಸರು ಬಂದಿದೆ ಎನ್ನುತ್ತದೆ ಒಂದು ಒಡಿಸ್ಸಾ ಜಾನಪದ ಗೀತೆ.

ಭಾಂಜ್‌ದೇವ್ ಮನೆತನದ ಮಹಾರಾಜನೊಬ್ಬ ಮೌರ್ಯ ರಾಜಪುತ್ರಿಯನ್ನು ವಿವಾಹವಾದ ಕಾರಣ 'ಮೌರ್ಯಭಾಂಜ್' ಎಂಬ ನಾಮಕರಣವಾಯಿತು ಎಂಬುದು ಮತ್ತೊಂದು ಕಥೆ. ದೇಶವನ್ನಾಳಿದ ಆಂಗ್ಲರ ಬಾಯಲ್ಲಿ ಇದು 'ಮಯೂರಭಾಂಜ್' ಆಗಿದೆ. ಈ ಮಯೂರ ಲಾಂಛನ, ಅರಮನೆಯ ಕಿಟಕಿ, ಬಾಗಿಲುಗಳ ಮೇಲೆ, ಪುರಾತನ ಆರಾಮಾಸನಗಳ ಮೇಲೆ ಕಾಣಬಹುದು.

ಬೆಲ್ಗೇಡಿಯಾ ಅರಮನೆಯ ಪ್ರಣಯ ಗಾಥೆಗಳಲ್ಲಿ ಪ್ರಸಿದ್ಧವಾದದ್ದು ಶ್ರೀರಾಮಚಂದ್ರ ಭಾಂಜ್ ದೇವ್ ಹಾಗೂ ಸುಚಾರುದೇವಿಯರ ಮೈನವಿರೇಳಿಸುವಂತಹ ಘಟನೆಗಳನ್ನು ಒಳಗೊಂಡ ರೋಚಕ ಕಥೆ!

***

ಮಯೂರಭಾಂಜ್ ವಂಶದಲ್ಲಿ 1871ರಲ್ಲಿ ಜನಿಸಿದ ಶ್ರೀರಾಮಚಂದ್ರ ಭಾಂಜ್‌ದೇವ, ಹನ್ನೊಂದು ವರ್ಷಕ್ಕೇ ಸಿಂಹಾಸನವೇರಬೇಕಾಗಿ ಬಂದದ್ದು, ಅವನ ತಂದೆ ಕೃಷ್ಣಚಂದ್ರ ಭಾಂಜ್‌ದೇವ್ ಗತಿಸಿದಾಗ. ಅವನ ಅಜ್ಜಿ, ದೋವೇಜರ್ ಮಹಾರಾಣಿ, ಮಹಾಮಾತೆಯಾಗಿ, 'ರೀಜೆಂಟ್' ಆಗಿ ರಾಜ್ಯಾಡಳಿತ ನಡೆಸಿದರೂ 1892ರ ಆಗಸ್ಟ್ ಹದಿನೈದರಂದು ಶ್ರೀರಾಮಚಂದ್ರನಿಗೆ ವಿಧಿವತ್ತಾಗಿ ಪಟ್ಟಾಭಿಷೇಕವಾಯಿತು.

ಇತ್ತ ಪಶ್ಚಿಮ ಬಂಗಾಳದ ಕಲ್ಕತ್ತೆಯ ಹೂಗ್ಲಿ ನದಿಯ ದಡದ ಮೇಲಿದ್ದ 'ಗರಿಫಾ' ಎಂಬ ಗ್ರಾಮದಲ್ಲಿ ಧನಾಢ್ಯ ವೈದ್ಯ ಹಿಂದೂ ಕುಟುಂಬಕ್ಕೆ ಜನಿಸಿದವರು ಕೇಶವಚಂದ್ರ ಸೇನರು. ಜಗನ್ಮೋಹಿನಿ ಸೇನಳನ್ನು ಮದುವೆಯಾದ ಕೇಶವಚಂದ್ರರಿಗೆ ಹುಟ್ಟಿದ ಹತ್ತು ಮಕ್ಕಳಲ್ಲಿ ಸುಚಾರುದೇವಿ ಮೂರನೆಯ ಸ್ತ್ರೀರತ್ನ.

ಬಂಗಾಳದ ಬ್ಯಾಂಕ್‌ನಲ್ಲಿ ಗುಮಾಸ್ತೆಯಾಗಿದ್ದ ಕೇಶವಚಂದ್ರರು, ರವೀಂದ್ರನಾಥ ಟ್ಯಾಗೋರರ ಪರಮಮಿತ್ರರು. ಇವರು ತತ್ವಜ್ಞಾನದ ದಾಹದಿಂದ ಕೆಲಸಕ್ಕೆ ರಾಜೀನಾಮೆಯಿತ್ತು ಸಮಾಜ ಸೇವೆಯಲ್ಲಿ ತೊಡಗಿದರು. ಮಹರ್ಷಿ ದೇವೇಂದ್ರನಾಥ ಟ್ಯಾಗೋರರ 'ಬ್ರಹ್ಮಸಮಾಜ'ಕ್ಕೆ ಸೇರಿದರು. ಭಿನ್ನಾಭಿಪ್ರಾಯಗಳಿಂದಾಗಿ, ಅದರಿಂದಲೂ ಹೊರಬಂದು ತಮ್ಮದೇ 'ಭಾರತವರ್ಷೀಯ ಬ್ರಹ್ಮಸಮಾಜ' ಕಟ್ಟಿದರು. ರಾಮಕೃಷ್ಣ ಪರಮಹಂಸರ ಪ್ರಭಾವಕ್ಕೆ ಒಳಗಾದರು. ಕ್ರೈಸ್ತ ಧರ್ಮ, ಹಿಂದೂ ಧರ್ಮ ಹಾಗೂ ವೈಷ್ಣವ ಭಕ್ತಿಪಂಥಗಳ ಒಳ್ಳೆಯದನ್ನೆಲ್ಲಾ ಒಟ್ಟುಗೂಡಿಸಿ, 'ನವವಿಧಾನ' ಎಂಬ ಹೊಸ ಪಂಥವನ್ನು ಕಟ್ಟಿದರು. ಬ್ರಿಟಿಷರನ್ನು ಬೆಂಬಲಿಸಿ, ಆರು ತಿಂಗಳ ಕಾಲ ಇಂಗ್ಲೆಂಡಿಗೆ ಹೋಗಿಬಂದ ಕೇಶವಚಂದ್ರರನ್ನು ಭಾರತೀಯರು ಬಹಿಷ್ಕರಿಸಿದರು.

ಇಂತಹ ಸಮಾಜ ಸುಧಾರಕ, ಕ್ರಾಂತಿಕಾರಿ ತತ್ವಜ್ಞಾನಿಯ ಮಗಳಾಗಿ 1874ರಲ್ಲಿ ಹುಟ್ಟಿದವಳೇ ಸುಚಾರುದೇವಿ. ತಂದೆಯೊಡನೆ ಕಳೆದದ್ದು ಹತ್ತೇ ವರ್ಷಗಳಾದರೂ, ಅದರ ತತ್ವಚಿಂತನೆ, ಸಾಮಾಜಿಕ ಕಳಕಳಿ, ಕ್ರಾಂತಿ ಮನೋಭಾವ ಎಲ್ಲಕ್ಕೂ ಸ್ಪಂದಿಸಿದಳು. ತನ್ನಲ್ಲೂ ಅಂಥದ್ದೇ ಸಂಘಟನಾ ಮನೋಭಾವ, ಕ್ರಾಂತಿಕಾರಿ ಚಿಂತನೆಗಳನ್ನು ಬೆಳೆಸಿಕೊಂಡಳು.

***

'ಮಯೂರ ಭಾಂಜ್' ಮನೆತನದ ರಾಜನಾದ ಶ್ರೀರಾಮಚಂದ್ರ ಭಾಂಜ್‌ದೇವ, ಸುಚಾರುದೇವಿಯನ್ನು ಮೊದಲ ಬಾರಿಗೆ ಕಂಡದ್ದು 1889ರಲ್ಲಿ, ಡಾರ್ಜಿಲಿಂಗ್‌ನ ರಮ್ಯ ವಾತಾವರಣದಲ್ಲಿ. ಅವನಿಗಾಗ ಹದಿನೆಂಟು, ಸುಚಾರುವಿಗೆ ಹದಿನೈದು. ವಿದ್ಯಾವಂತರಾಗಿದ್ದ ಇಬ್ಬರಲ್ಲೂ ಪ್ರೇಮಾಂಕುರವಾಯಿತು. ನಿಶ್ಚಿತಾರ್ಥವನ್ನು ತಾವೇ ಮಾಡಿಕೊಂಡರು. ಅವಳನ್ನೇ ಮದುವೆಯಾಗುವೆನೆಂಬ ಶ್ರೀರಾಮಚಂದ್ರನ ಹಟವನ್ನು, ರಾಜನ ಅಜ್ಜಿ ಪುರಸ್ಕರಿಸಲಿಲ್ಲ. 'ಏನು! ಕೇಶವಚಂದ್ರರಂತಹ ಕ್ರಾಂತಿಯ ಮಗಳು ಮಯೂರ್‌ಭಾಂಜ್‌ನ ಮಹಾರಾಣಿಯೇ? ಅಸಾಧ್ಯ' ಎಂದು